ಶ್ರೀ ಯು.ಟಿ. ಖಾದರ್: ಅಧ್ಯಕ್ಷರೆ, ಸರ್ಕಾರದಿಂದ ಭರವಸೆಯನ್ನು ಕೊಡಬೇಕು.

ಅಧ್ಯಕ್ಷರು: ಇದು ಶೂನ್ಯವೇಳೆಗೆ ಬರುವುದಿಲ್ಲ. ನಿಮ್ಮ informationಗೆ ಹೇಳಿದ್ದೇನೆ. ನಾನು ಪುಟ್ಟರಾಜುರವರನ್ನು ಕರೆದಿದ್ದೇನೆ.

ಶ್ರೀ ಯು.ಟಿ. ಖಾದರ್: ಸರ್ಕಾರ ಇದಕ್ಕೆ ಸ್ಪಂದನೆ ಮಾಡಬೇಕು. ಸೂಕ್ತವಾದ ಭರವಸೆಯನ್ನು ಕೊಟ್ಟರೆ ಬಹುಶಃ ಅವರಿಗೆ withdraw ಮಾಡಬಹುದು, ತಾವು ಒಂದು ಮಾತು ಹೇಳಿದರೆ ಆಗುತ್ತದೆ.

ಶ್ರೀ ಎಸ್. ಸುರೇಶ್‌ಕುಮಾರ್: ಈಗ ಭರವಸೆಯನ್ನು ಕೊಟ್ಟಿದ್ದೇವೆ. ತರಬೇತಿಯನ್ನು ಕೊಡುತ್ತಿದ್ದೇವೆ. ಅವರಿಗೆ ಆರ್ಥಿಕ ಸೌಲಭ್ಯವನ್ನು ಕೊಡುತ್ತಿದ್ದೇವೆ. ಈಗಾಗಲೇ ಸಭೆ ಕೂಡ ನಡೆದಿದೆ. ಅಭಯಚಂದ್ರರವರು ಆ ಸಭೆಯಲ್ಲಿ ಭಾಗವಹಿಸಿದ್ದಾರೆ. ಅವರೇ ಆ ಪ್ರತಿಭಟನಾಕಾರರಿಗೆ ಭರವಸೆಯನ್ನು ಕೊಡಬಹುದು. ಯಾರಿಗೂ ಕೂಡ ಅನ್ಯಾಯವಾಗದಿರುವಂತೆ ಅವರಿಗೆ ಉದ್ಯೋಗವನ್ನು ಕೊಡುವ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಶ್ರೀ ಸಿ.ಎಸ್. ಪುಟ್ಟರಾಜು.

(ಇ) **ವಿಷಯ: ಮೈಸೂರು–ನಂಜನಗೂಡಿನ ಉಂಡಬತ್ತಿನ ಕೆರೆಯ ಬಳಿ ನಡೆದ ಟೆಂಪೋ ದುರಂತದ ದುರ್ಘಟನೆಯಲ್ಲಿ ಮಡಿದವರಿಗೆ ಪರಿಹಾರ ನೀಡುವ ಬಗ್ಗೆ.**

ಶ್ರೀ ಸಿ.ಎಸ್. ಪುಟ್ಟರಾಜು (ಮೇಲುಕೋಟೆ): ಮೈಸೂರು ನಂಜನಗೂಡಿನ ಉಂಡಬತ್ತಿನ ಕೆರೆಯ ಬಳಿ ನಡೆದ ಟೆಂಪೋ ದುರಂತದ ಘಟನೆ ಇಡೀ ರಾಜ್ಯವನ್ನೇ ತಲ್ಲಣಗೊಳಿಸಿರುವಂಥ ವಿಚಾರ. ಸಂಬಂಧಪಟ್ಟ ಗ್ರಾಮದ 31 ಜನ ಆ ಸ್ಥಳದಲ್ಲಿ ಅಸು ನೀಗಿರುವ ಸಂದರ್ಭದಲ್ಲಿ ಈ ಘಟನೆ ನಡೆದಾಗ ನಮ್ಮ ವಿರೋಧ ಪಕ್ಷದ ನಾಯಕರು, ಹಾಗೂ ಮಾಜಿ

ಮುಖ್ಯಮಂತ್ರಿಗಳು ಆ ಸಂದರ್ಭದಲ್ಲಿ ಬಂದಿದ್ದರು. ಅದಾದ ಮೇಲೆ 11–15 ದಿವಸಗಳ ಕಾರ್ಯಕ್ರಮದಲ್ಲಿ ಈ ರಾಜ್ಯದ ಗೌರವಾನ್ವಿತ ಮುಖ್ಯಮಂತ್ರಿಗಳು ಮತ್ತು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಆ ಸಂದರ್ಭದಲ್ಲಿ ಬಂದು ಅಲ್ಲಿ 31 ಜನರನ್ನು ಕಳೆದುಕೊಂಡ ಕುಟುಂಬದವರಿಗೆ ಸಾಂತ್ವನ ಹೇಳಿ, ಅಲ್ಲಿ ಕಟ್ಟೇರಿ ಮತ್ತು ಅರಳುಕುಪ್ಪೆ ಗ್ರಾಮಗಳಲ್ಲಿ ಸಾಮೂಹಿಕ ಅಂತ್ಯಕ್ರಿಯೆಯನ್ನು ನಾವು ಮಾಡಿದ್ದೆವು. ಅಂಥ ಸಂದರ್ಭದಲ್ಲಿ ಅವರ ಜ್ಞಾಪಕಾರ್ಥವಾಗಿ ಉಳಿಯತಕ್ಕಂಥ ಕೆಲಸಗಳನ್ನು ಮಾಡಲಿಕ್ಕೆ ಮುಖ್ಯಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದರು. ಆ ಆಕ್ರಂದನವನ್ನು ನೋಡಲಾರದೆ ಹೆಚ್ಚುವರಿಯಾಗಿ ಇಡೀ ಒಂದೊಂದು ಕುಟುಂಬದಲ್ಲಿ 8–9 ಜನ ಒಂದೇ ಕುಟುಂಬದ ಮಹಿಳೆಯರು ಸತ್ತಂಥ ಸಂದರ್ಭದಲ್ಲಿ ಅವರಿಗೆ ಹೆಚ್ಚುವರಿಯಾಗಿ ಪರಿಹಾರವನ್ನು ಕೊಡಬೇಕೆಂದು ನಾವು ಒತ್ತಾಯ ಮಾಡಿದಾಗ ಮುಖ್ಯಮಂತ್ರಿಗಳೂ ಸ್ಪಂದಿಸಿ ಕೊಡುವಂಥ ಕೆಲಸ ಮಾಡಲು ಅಂದು ಚುನಾವಣೆ ಸಂಹಿತೆ ಇದ್ದ ಕಾರಣದಿಂದ ನಾನು ಕರೆದು ಆ ಕೆಲಸವನ್ನು ಮಾಡಿಕೊಡುತ್ತೇನೆಂದು ಹೇಳಿದ್ದರು, ಆದಷ್ಟು ಬೇಗ ಮಾನ್ಯ ಮುಖ್ಯಮಂತ್ರಿಗಳು ಅಂದು ಅವರು ಕೊಟ್ಟಂಥ ಭರವಸೆಯನ್ನು ಈಡೇರಿಸುವಂಥ ಕೆಲಸವನ್ನು ಮಾಡಿಕೊಡಬೇಕೆಂದು ಈ ಮೂಲಕ ಮುಖ್ಯಮಂತ್ರಿಗಳನ್ನು ಕೇಳಬಯಸುತ್ತೇನೆ. ಜೊತೆಗೆ ಇಡೀ ರಾಜ್ಯಾದ್ಯಂತ ಅದರಲ್ಲಿಯೂ ನನ್ನ ಮೇಲುಕೋಟೆಯ ವಿಧಾನಸಭಾ ಕ್ಷೇತ್ರದಲ್ಲಿ ಇವತ್ತು ನಮ್ಮ ಲೋಕೋಪಯೋಗಿ ಇಲಾಖೆಯ ಮುಖ್ಯರಸ್ತೆಗಳು ಹಾದು ಹೋಗಿರುವಂಥ ರಸ್ತೆಗಳು ಬಹಳ ಅಪಾಯವನ್ನು ತಂದೊದಗುವಂತಹ ಪರಿಸ್ಥಿತಿಯಲ್ಲಿ ಇವೆ. ಇವತ್ತು ಬಹುತೇಕ ನಮ್ಮ ವಿ.ಸಿ. ನಾಲೆ, ಅಚ್ಚುಕಟ್ಟು ನಾಲೆಯ ಒಂದು ಟನಲ್ ಪಾಸ್ ಆಗುತ್ತದೆ. ಬಹಳ ಆಳದಲ್ಲಿ ನಮ್ಮ ವಿಶ್ವೇಶ್ವರಯ್ಯ ಕೆನಾಲ್ ಹರಿದು ಬರುವ ಪಕ್ಕದಲ್ಲಿ ನಮ್ಮ ಲೋಕೋಪಯೋಗಿ ರಸ್ತೆ ಹೋಗಿದೆ. ಮೊನ್ನೆ ತಾನೆ ಅದಕ್ಕೆ ಸಂಬಂಧಪಟ್ಟಂತಹ superintendent engineerರವರು ಮಾಹಿತಿಯನ್ನು ತಮ್ಮ ಇಲಾಖೆಗೆ

ತಲುಪಿಸಿದ್ದಾರೆ. ಆ ಬದಿಗೋಡೆಗಳನ್ನು ಆದಷ್ಟು ಬೇಗ ಕೆರೆ ಮತ್ತು ಇಂತಹ ಅಪಘಾತ ಆಗತಕ್ಕಂತಹ ಸ್ಥಳಗಳಲ್ಲಿ ಹಾಕಿಸಿಕೊಡುವಂತಹ ಕೆಲಸ ಮೊದಲು ಆಗಬೇಕು. ಇವತ್ತು ಏನು 31 ಜನ ತೀರಿಕೊಂಡಿದ್ದಾರೆ ಅವರ ಕುಟುಂಬಗಳಿಗೆ ಹೆಚ್ಚುವರಿಯಾಗಿ ಪರಿಹಾರ ಕೊಡತಕ್ಕಂತಹ ಘೋಷಣೆ ಮಾಡುವುದನ್ನು ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಮಾಡಬೇಕು. ಅಲ್ಲಿ ಎರಡೂ ಜಾಗದಲ್ಲಿಯೂ ಎರಡು ಸ್ಮಾರಕಗಳನ್ನು ಮಾಡುವುದು, ಅದರ ಜ್ಞಾಪಕಾರ್ಥಕವಾಗಿ ಅಲ್ಲಿ ಎರಡು ಗ್ರಾಮದಲ್ಲಿ ಎರಡು ಸ್ಟೇಡಿಯಂಗಳನ್ನು ಮಾಡುವಂತಹ ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟ ಭರವಸೆಯನ್ನು ಈ ಮುಖಾಂತರ ಈಡೇರಿಸಿ ಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಈ ಮೈಸೂರು–ನಂಜನಗೂಡು ರಸ್ತೆ, ಉಂಡಬತ್ತಿನಕೆರೆ ದುರಂತ ಬಹುಶ: ಯಾರೂ ಕಲ್ಪನೆ ಮಾಡಿಕೊಳ್ಳದ ರೀತಿಯಲ್ಲಿ ಸುಮಾರು 32 ಜನರ ಸಾವಾಯಿತು. ಆ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮಕ್ಕೆ ನಾನು ಹಾಗೂ ಅಶೋಕ್‌ರವರು ನಾವೆಲ್ಲಾ ಅಲ್ಲಿಗೆ ಬಂದಿದ್ದೆವು. ಅವರಿಗೆ ಹೆಚ್ಚಿನ ಪರಿಹಾರ ಕೊಡುತ್ತೇನೆಂದು ನಾನು ಹೇಳಿದ್ದೇನೆ. ಒಂದು ಲಕ್ಷ ಪರಿಹಾರ ಈಗಾಗಲೇ ಕೊಟ್ಟಿದ್ದೇನೆ. ನಾನು ಭರವಸೆ ಕೊಟ್ಟಂತೆ ತಕ್ಷಣ ಇನ್ನೂ ಒಂದು ಕುಟುಂಬಕ್ಕೆ 50 ಸಾವಿರದಂತೆ ಹೆಚ್ಚು ಪರಿಹಾರ ಕೊಡುವುದು, ಜೊತೆಗೆ ಯಾವ ಸ್ಥಳದಲ್ಲಿ ಕಾರ್ಯಕ್ರಮ ನಡೆಯಿತು, ಅಲ್ಲಿ ಅವರ ಸ್ಮರಣೆಗಾಗಿ ನೀರಾವರಿ ಇಲಾಖೆಯಿಂದ ಒಂದು ಗಾರ್ಡನ್ ಮಾಡಿ ಅಭಿವೃದ್ಧಿಪಡಿಸುತ್ತೇವೆ ಎಂದು ನಾನು ಭರವಸೆ ಕೊಟ್ಟಿದ್ದೇನೆ. ತಕ್ಷಣ ಆ ಕೆಲಸ ಪ್ರಾರಂಭ ಮಾಡಿಸುತ್ತೇವೆ. ಹೆಚ್ಚುವರಿಯಾಗಿ ನಾನು ಭರವಸೆ ಕೊಟ್ಟಂತೆ ಇನ್ನೂ 50 ಸಾವಿರ ಹೆಚ್ಚು ಪರಿಹಾರ ಕೊಡುವುದಕ್ಕೆ ತಕ್ಷಣ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ: ಶಬರಿಮಲೆ ದುರಂತದಲ್ಲಿ ಸಾವಿಗೀಡಾದವರಿಗೆ ಪರಿಹಾರ ಕೊಡಬೇಕು.

(ಗೊಂದಲ)

ಅಧ್ಯಕ್ಷರು: ಇದು ಶೂನ್ಯ ವೇಳೆ. ನೀವು ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿ.ಎಸ್. ಪುಟ್ಟರಾಜು: ಎರಡು ಸ್ಪೇಡಿಯಂಗಳನ್ನು ಮಾಡಬೇಕು. ಆ ಭಾಗದ ಜನರಿಗೆ ಒತ್ತಾಸೆ ಕೊಡಬೇಕು.

ಅಧ್ಯಕ್ಷರು: ನರೇಂದ್ರ ಬಾಬುರವರು.

(ಈ) ಮಹಾಲಕ್ಷ್ಮಿ ಬಡಾವಣೆಯಲ್ಲಿ ನಿರ್ಮಿಸುತ್ತಿರುವ ಕಂಠೀರವ ನಗರ ಸ್ಲಮ್‌ನಲ್ಲಿ ಕೇಂದ್ರ ಸರ್ಕಾರದ ನರ್ಮ್ ಯೋಜನೆಯಡಿಯಲ್ಲಿ 600 ಮನೆಗಳನ್ನು ಗುತ್ತಿಗೆದಾರರು ಸಮಯೋಚಿತವಾಗಿ ನಿಗದಿತ ಸಮಯದಲ್ಲಿ ಕಟ್ಟುತ್ತಿಲ್ಲ ಎಂಬುದರ ಬಗ್ಗೆ.

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಬಡಾವಣೆ): ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಕಂಠೀರವ ನಗರ ಸ್ಲಮ್ ಎಂದು ಇದೆ. ಆ ಕಂಠೀರವ ನಗರ ಸ್ಲಮ್‌ನಲ್ಲಿ ಕೇಂದ್ರ ಸರ್ಕಾರದ ನರ್ಮ್ ಯೋಜನೆಯಡಿಯಲ್ಲಿ ಸುಮಾರು 600 ಮನೆಗಳನ್ನು ಕಟ್ಟುತ್ತಿದ್ದಾರೆ. ಈಗ ಆರಂಭ ಮಾಡಿ ಎರಡು ವರ್ಷಗಳಾಯಿತು. ಆದರೆ, ಆ ಗುತ್ತಿಗೆದಾರರು ಇದುವರೆಗೂ ಸಹ ಸಮಯೋಚಿತವಾಗಿ ನಿಗದಿತ ಸಮಯದಲ್ಲಿ ಕಟ್ಟುತ್ತಿಲ್ಲ. ಅಲ್ಲಿ ಕಟ್ಟುವುದಕ್ಕೆ sub contract, sub contract, sub contract ಆಗಿದೆ. ಅವರು ಇನ್ನೊಬ್ಬರು contractor, ಅವರು ಇನ್ನೊಬ್ಬರು contractor ಹೀಗೆ ಮೂರು-ಮೂರು sub contractorಗಳಿಗೆ ಕೊಟ್ಟು, ಅವರು ಬಳಸುತ್ತಿರುವುದು ಫಿಲ್ಟರ್ ಮರಳು, ಬಳಸುತ್ತಿರುವ ಸಿಮೆಂಟ್ ಇಟ್ಟಿಗೆಗಳು